4.6 ಬಡ್ಡಿಯನ್ನು ಲೆಕ್ಕ ಮಾಡುವುದು

ಉಳಿತಾಯ ಖಾತೆಗೆ, ಬ್ಯಾಂಕುಗಳು ಮತ್ತು ಅಂಚೆ ಕಛೇರಿಗಳು ಅತ್ಯಲ್ಪ ಬಡ್ಡಿಯನ್ನು ಕೊಡುತ್ತವೆ. ಈ ಬಡ್ಡಿಯ ದರವು ಕಾಲಕಾಲಕ್ಕೆ ವ್ಯತ್ಯಾಸವಾಗುತ್ತದೆ. 2010 ಕ್ಕೂ ಮುಂಚೆ ಬ್ಯಾಂಕುಗಳಲ್ಲಿ ಈ ಬಡ್ಡಿಯ ದರದ ಮಿತಿಯನ್ನು ಭಾರತೀಯ ರಿಸರ್ವ್ ಬ್ಯಾಂಕ್ ನಿರ್ಧರಿಸುತ್ತಿತ್ತು. ಈಗ ಬ್ಯಾಂಕುಗಳು ಉಳಿತಾಯ ಖಾತೆಗೆ ನೀಡುವ ಬಡ್ಡಿದರವನ್ನು ಅವೇ ನಿರ್ಧರಿಸಬಹುದು. ಕೆಲವು ಬ್ಯಾಂಕ್ ಗಳು 7% ರಂತೆಯೂ ಬಡ್ಡಿಯನ್ನು ನೀಡುತ್ತಿವೆ. ಮುಂಚಿನಂತೆ ಈಗಲೂ ಅಂಚೆ ಕಛೇರಿಗಳಲ್ಲಿ ಕೊಡುವ ಬಡ್ಡಿಯ ದರವನ್ನು ಭಾರತ ಸರಕಾರದ ಆರ್ಥಿಕ ಸಚಿವಾಲಯ ನಿರ್ಧರಿಸುತ್ತದೆ. ಅದು 3.5% ಆಗಿದೆ.

ಉಳಿತಾಯ ಖಾತೆಗೆ ಅಂಚೆ ಕಛೇರಿಗಳಲ್ಲಿ ಪ್ರತೀ ತಿಂಗಳ ಕನಿಷ್ಟ ಮೊತ್ತದ(1 ನೇ ತಾರೀಕಿನಿಂದ 10 ರ ವರೆಗಿನ) ಮೇಲೆ ಬಡ್ಡಿಯನ್ನು ಲೆಕ್ಕ ಹಾಕಿ, ವರ್ಷಕ್ಕೊಮ್ಮೆ, ಉಳಿತಾಯಖಾತೆಗೆ ಜಮಾ ಮಾಡುತ್ತಾರೆ.

ಬ್ಯಾಂಕ್ ಗಳಲ್ಲಿ , ಏಪ್ರಿಲ್ 2010 ರಿಂದ ಈ ಕ್ರಮ ಬದಲಾಗಿದ್ದು, ಪ್ರತೀ ದಿನದ ಅಂತ್ಯದ ಶಿಲ್ಕಿನ ಆಧಾರದ ಮೇಲೆ ಬಡ್ಡಿ ಲೆಕ್ಕಿಸುತ್ತಾರೆ.

A Project of www.eShale.org

4.6.1 ಬ್ಯಾಂಕುಗಳಲ್ಲಿ ಉಳಿತಾಯ ಖಾತೆಯ ಮೇಲಿನ ಬಡ್ಡಿ :

ಬ್ಯಾಂಕ್ ಗಳಲ್ಲಿ ಬಡ್ಡಿಯನ್ನು ದಿನದ ಅಂತ್ಯದ ಶಿಲ್ಕಿನ ಮೇಲೆ ಲೆಕ್ಕಹಾಕಿದರೂ ಆ ಬಡ್ಡಿಯನ್ನು ಮೂರು/ಆರು ತಿಂಗಳಿಗೊಮ್ಮೆ ಮಾತ್ರ ಉಳಿತಾಯ ಖಾತೆಗೆ ಸೇರಿಸುತ್ತಾರೆ.

ಬಡ್ಡಿ ಲೆಕ್ಕಹಾಕುವ ಕ್ರಮ:

ಒಬ್ಬನ ಉಳಿತಾಯ ಖಾತೆಯಲ್ಲಿ ಫೆಬ್ರವರಿ 2016 ರಲ್ಲಿ ಇದ್ದಂತಹ ವ್ಯವಹಾರ

ದಿನಾಂಕ	ಶಿಲ್ಕು	ಇದೇ ಶಿಲ್ಕು ಇರುವಂತಹ ದಿನಗಳು	ಒಂದು ದಿನಕ್ಕೆ ಸಮನಾದಂತಹ ಶಿಲ್ಕು
1 ರಿಂದ 5 ರ ವರೆಗೆ	2000	5	10,000(=2000*5)
6 ರಿಂದ 9 ರ ವರೆಗೆ	2500	4	10,000(=2500*4)
10 ರಂದು	2200	1	2,200(=2200*1)
11 ರಿಂದ 20 ರ ವರೆಗೆ	3000	10	30,000(=3000*10)
21 ರಿಂದ 25 ರ ವರೆಗೆ	2600	5	13,000(=2600*5)
26 ರಿಂದ 28 ರ ವರೆಗೆ	1400	3	5,200(=1400*3)
29 ರಂದು	1300	1	1,300(=1300*1)
ಒಟ್ಟು		29	71,700

ಏಪ್ರಿಲ್ 2010 ರಿಂದ ಅನ್ವಯವಾಗುವಂತೆ, ರೂ. 71,700 ಗಳನ್ನು ಖಾತೆದಾರ ಒಂದು ದಿನ ಬ್ಯಾಂಕ್ ನಲ್ಲಿ ಇರಿಸಿದ್ದಾನೆ ಎಂದು ಭಾವಿಸಿ ಬ್ಯಾಂಕ್ ಗಳು ಉಳಿತಾಯ ಖಾತೆಯ ಮೇಲೆ ಬಡ್ಡಿ ಲೆಕ್ಕಹಾಕುತ್ತಾರೆ.

A Project of www.eSnale.org

4.6.1 ಸಮಸ್ಯೆ1: ಓರ್ವನ ಉಳಿತಾಯ ಖಾತೆಯಲ್ಲಿ ಶಿಲ್ಕುಗಳ ವಿವರ ಈ ಕೆಳಗಿನಂತಿದ್ದರೆ, ಬಡ್ಡಿದರ 4% ರಂತೆ ಬಡ್ಡಿ ಕಂಡುಹಿಡಿಯಿರಿ.

ಏಪ್ರಿಲ್ 2015 ತಿಂಗಳ ಎಲ್ಲಾ ದಿನಗಳಲ್ಲಿನ ಅಂತಿಮ ಶಿಲ್ಕು ರೂ. 2000.

ಮೇ 2015 ತಿಂಗಳ ಎಲ್ಲಾ ದಿನಗಳಲ್ಲಿನ ಅಂತಿಮ ಶಿಲ್ಕು ರೂ. 2400.

ಜೂನ್ 2015 ತಿಂಗಳ ಎಲ್ಲಾ ದಿನಗಳಲ್ಲಿನ ಅಂತಿಮ ಶಿಲ್ಕು ರೂ. 1600.

ಪರಿಹಾರ :

ಬ್ಯಾಂಕುಗಳಲ್ಲಿ ಬಡ್ಡಿಯನ್ನು ಉಳಿತಾಯ ಖಾತೆಗೆ, ಮೂರು/ಆರು ತಿಂಗಳಿಗಳಿಗೊಮ್ಮೆ ಜಮಾ ಮಾಡುವುದರಿಂದ, ಬ್ಯಾಂಕುಗಳಲ್ಲಿ " ದೈನಂದಿನ ಉತ್ಪನ್ನ" ಎಂಬ ಪದವನ್ನು ಉಪಯೋಗಿಸುತ್ತಾರೆ. ಇದು ಎಲ್ಲಾ ಮೂರು/ಆರು ತಿಂಗಳಲ್ಲಿನ ದಿನಾಂತ್ಯದ ಕನಿಷ್ಟ ಶಿಲ್ಕುಗಳ ಮೊತ್ತ, ಇದು ಬಡ್ಡಿ ಪಡೆಯಲು ಆರ್ಹವಾದ ಮೊಬಲಗು. ಇದನ್ನು "ಉತ್ಪನ್ನ" ಎಂದು ಕರೆಯುತ್ತಾರೆ

ದಿನಾಂತ್ಯದ ಶಿಲ್ಕನ್ನು ದಿನದ ಉತ್ಪನ್ನ ಎಂದು ಕರೆಯುತ್ತಾರೆ.

ಮೇಲಿನ ಲೆಕ್ಕದಲ್ಲಿ

ಉತ್ಪನ್ನ= 2000*30+2400*31+1600*30= 1,82,400.

4% ಬಡ್ಡಿದರದಂತೆ ರೂ. 1,82,400 ಮೇಲೆ ಬಡ್ಡಿಯನ್ನು ಕಂಡುಹಿಡಿದು ಅದನ್ನು ಮುಂದಿನ ತ್ರೈಮಾಸಿಕದ ಮೊದಲ ದಿನ ಅಂದರೆ ಜುಲೈ 1ರಂದು ಖಾತೆಗೆ ಸೇರಿಸುತ್ತಾರೆ.

ಇದಕ್ಕಾಗಿ ಉಪಯೋಗಿಸುವ ಸೂತ್ರ

ಬಡ್ಡಿ= $P*\frac{1}{365}*\frac{R}{100}$; P = ಅಸಲು(ಉತ್ಪನ್ನ) ; N = ಅವಧಿ(1 ದಿನ = $\frac{1}{365}$ ವರ್ಷ) ; R = ಬಡ್ಡಿದರ

ಬಡ್ಡಿ = $P*\frac{1}{365}*\frac{R}{100}$ = $182400*\frac{1}{365}*\frac{4}{100}$ = ರೂ. 19.90

ಈ ರೂ. 19.90 ನ್ನು ಜುಲೈ 1ರಂದು ಖಾತೆಗೆ ಸೇರಿಸುತ್ತಾರೆ.

A Project of www.eShale.org

ಸಾಮಾನ್ಯವಾಗಿ ಬ್ಯಾಂಕ್ ಗಳು ಬಡ್ಡಿ ಜಮೆಮಾಡಲು ಅನುಸರಿಸುವ ವೇಳಾಪಟ್ಟಿ :

ತಿಂಗಳುಗಳಲ್ಲಿನ ದೈನಂದಿನ ಶಿಲ್ಕಿನ ಮೇಲಿನ ಬಡ್ಡಿಯ ಲೆಕ್ಕ	ಬಡ್ಡಿಯನ್ನು ಸೇರಿಸುವ ದಿನ
ಜನವರಿ+ಫೆಬ್ರವರಿ+ಮಾರ್ಚ್	ಏಪ್ರಿಲ್ 1
ಏಪ್ರಿಲ್+ಮೇ+ಜೂನ್	ಜುಲೈ 1
ಜುಲೈ+ ಆಗಸ್ಟ್+ಸೆಪ್ಟೆಂಬರ್	ಅಕ್ಟೋಬರ್ 1
ಅಕ್ಟೋಬರ್+ನವೆಂಬರ್+ಡಿಸೆಂಬರ್	ಜನವರಿ 1

A Project of www.eShale.org

4.6.1 ಸಮಸ್ಯೆ 2 : ಕರ್ಣಾಟಕ ಬ್ಯಾಂಕಿನಲ್ಲಿ ಒಬ್ಬರ ಉಳಿತಾಯ ಪಾಸ್ ಪುಸ್ತಕದ ದಾಖಲೆಗಳು ಈ ಕೆಳಗಿನಂತಿವೆ. ಮೂರು ತಿಂಗಳ ಅವಧಿಗೆ (ಎಪ್ರಿಲ್, ಮೇ, ಜೂನ್ 2015)ಬ್ಯಾಂಕಿನವರು ಲೆಕ್ಕ ಹಾಕಿರುವ ಬಡ್ಡಿಯನ್ನು ತಾಳೆನೋಡಿ. (ಬಡ್ಡಿಯದರ 5%)

ತಾ	ವಿವರಗಳು	ಹಿಂತೆಗೆತ(-)	ಜಮಾ(+)	ಶಿಲ್ಕು
1/4/2015	ಆರಂಭ	-		1500.00
9/4/2015	ಚೆಕ್ ನಿಂದ ತೆಗೆದಿದ್ದು	300		1200.00
10/4/2015	ನಗದು ಹಾಕಿದ್ದು		100.00	1300.00
10/4/2015	ಚೆಕ್ ನಿಂದ ತೆಗೆದಿದ್ದು	200.00		1100.00
1/6/2015	ಚೆಕ್ ಸೇರಿಸಿದ್ದು		300.00	1400.00
15/6/2015	ನಗದು ಹಾಕಿದ್ದು		300.00	1700.00
1/7/2015	ಬಡ್ಡಿ ಸೇರಿಸಿದ್ದು		16.05	1716.05

ಪರಿಹಾರ :

ಏಪ್ರಿಲ್ 2015 ರಿಂದ ಆರಂಭಿಸಿ ಮೂರು ತಿಂಗಳ ಉತ್ಪನ್ನವನ್ನು ಕಂಡುಹಿಡಿಯುವಾ.

ಸಂ.	ತಿಂಗಳು	ಉತ್ಪನ್ನ	ವಿವರಣೆ
1	ಎಪ್ರಿಲ್ 2015	1500*8= 12000 1200*1= 1200 1100*21=23,100	8 ರ ವರೆಗೆ ಶಿಲ್ಕು 1500. 9 ರ ಶಿಲ್ಕು 1200 10 ರಂದು ಎರಡು ವ್ಯವಹಾರಗಳಿದ್ದು ದಿನಾಂತ್ಯದ ಶಿಲ್ಕು 1100. ಏಪ್ರಿಲ್ ಪೂರ್ತಿ ಅದೇ ಶಿಲ್ಕು
2	ಮೇ 2015	1100*31=34,100	ಮೇ ನಲ್ಲಿ ಯಾವುದೇ ವ್ಯವಹಾರವಿಲ್ಲದೆ ಏಪ್ರಿಲ್ ಶಿಲ್ಕು 1100 ಮೇ ನ ಎಲ್ಲಾ ದಿನಗಳಲ್ಲಿ ಇದೆ.
3	ಜೂನ್ 2015	1400*14=19,600 1700*16=27,200	14 ರ ವರೆಗೆ 14 ದಿನಗಳಲ್ಲಿ ಶಿಲ್ಕು 1400 ಇದ್ದಿದ್ದು ಮುಂದಿನ 16 ದಿನಗಳಲ್ಲಿ ಶಿಲ್ಕು 1700 ಆಗಿದೆ
	ಒಟ್ಟು	1,17,200	

A Project of www.eShale.org

$\therefore$ಬಡ್ಡಿ = $P*\frac{1}{365}*\frac{R}{100}$ = $1,17,200*\frac{1}{365}*\frac{5}{100}$ = 16.05

ಕರ್ನಾಟಕ ಬ್ಯಾಂಕ್ ನವರು ಬಡ್ಡಿಯನ್ನು ಲೆಕ್ಕಹಾಕಿರುವುದು ಸರಿಯಾಗಿಯೇ ಇದೆ. ಜುಲೈ 1 ರಿಂದ ಆರಂಭಿಸಿ ಈ ಬಡ್ಡಿಯ ಹಣದ ಮೇಲೂ ಬಡ್ಡಿಯನ್ನು ಹಾಕಲಾಗುತ್ತದೆ.

ಗಮನಿಸಿ :

1. ರೂ 5,000 ಅಸಲಿನ ಮೇಲೆ 30 ದಿನಗಳಿಗೆ ಸಿಗುವ ಬಡ್ಡಿಯೂ ಮತ್ತು ರೂ 1,50,000(=5000*30) ಗಳ ಮೇಲೆ 1 ದಿನಕ್ಕೆ ಸಿಗುವ ಬಡ್ಡಿಯೂ ಒಂದೇ.
   ($\because$5000*30 ದಿನಗಳು = 1,50,000*1 ದಿನ)
2. ರೂ 5,000 ಅಸಲಿನ ಮೇಲೆ 12 ತಿಂಗಳಿಗೆ ಸಿಗುವ ಬಡ್ಡಿಯೂ ರೂ 60, 000(=5000*12) ಗಳ ಮೇಲೆ 1 ತಿಂಗಳಿಗೆ ಸಿಗುವ ಬಡ್ಡಿಯೂ ಒಂದೇ.
   ($\because$5000*12 ತಿಂಗಳುಗಳು = 60,000*1 ತಿಂಗಳು)

4.6.2 ಅಂಚೆ ಕಛೇರಿಗಳಲ್ಲಿ ಉಳಿತಾಯ ಖಾತೆಗಳ ಮೇಲಿನ ಬಡ್ಡಿ

ಅಂಚೆ ಕಛೇರಿಗಳಲ್ಲಿಯೂ ಉಳಿತಾಯ ಖಾತೆಗಳ ಮೇಲೆ ಬಡ್ಡಿಯನ್ನು ಬ್ಯಾಂಕುಗಳಲ್ಲಿ ಲೆಕ್ಕ ಹಾಕಿದಂತೆಯೇ ಹಾಕುತ್ತಾರೆ. ಆದರೆ ಬಡ್ಡಿಯನ್ನು ಖಾತೆಗೆ ವರ್ಷಕ್ಕೊಮ್ಮೆ ಮಾತ್ರ (ಎಪ್ರಿಲ್ 1ಕ್ಕೆ) ಜಮಾ ಮಾಡುತ್ತಾರೆ. ಅಂಚೆ ಕಛೇರಿಗಳಲ್ಲಿ ಪ್ರತಿ ತಿಂಗಳಿನ ಕನಿಷ್ಟ ಶಿಲ್ಕನ್ನು "ಬಡ್ಡಿ ತರುವ ಶಿಲ್ಕು" ಎಂದು ಕರೆಯುತ್ತಾರೆ. ಇದು ಪ್ರತಿ ತಿಂಗಳಿನ 10ನೇ ತಾರೀಕಿನಿಂದ ತಿಂಗಳಾಂತ್ಯದವರೆಗೆ ದಿನಗಳ ಕೊನೆಯಲ್ಲಿ ಖಾತೆಯಲ್ಲಿರುವ ಕನಿಷ್ಟ ಶಿಲ್ಕು ಆಗಿರುತ್ತದೆ. ಉಳಿತಾಯ ಖಾತೆಗಳ ಬಡ್ಡಿಯನ್ನು ಸೂತ್ರ ಉಪಯೋಗಿಸಿ ಕಂಡು ಹಿಡಿಯಬಹುದು.

A Project of www.eShale.org

4.6.2 ಸಮಸ್ಯೆ 1 : ಮಾಧುರಿಗೆ ಅಂಚೆ ಕಛೇರಿಯ ಉಳಿತಾಯ ಖಾತೆ ಇದೆ. ಅವಳ ಪಾಸ್ ಪುಸ್ತಕದ ಒಂದು ಪ್ರತಿಯನ್ನು ಇಲ್ಲಿ ಕೊಟ್ಟಿದೆ. 01/04/2000 ದಂದು ಅವಳ ಖಾತೆಗೆ 4% ವಾರ್ಷಿಕ ದರದಲ್ಲಿ ಜಮೆಯಾಗುವ ಬಡ್ಡಿಯನ್ನು ಲೆಕ್ಕಹಾಕಿ

ದಿನಾಂಕ	ಹಿಂಪಡೆತ(-)	ಜಮಾ(+)	ಶಿಲ್ಕು
1/4/99	-	20.00	20.00
6/5/99		275.00	295.00
18/6/99	22.00		273.00
26/6/99		108.00	381.00
7/7/99		113.00	494.00
7/8/99	24.00		470.00
12/10/99	17.00		453.00
5/11/99		130.00	583.00
11/12/99		105.00	688.00
8/1/2000	95.00		593.00
22/2/2000	210.00		383.00
10/3/2000		38.00	421.00

ಪರಿಹಾರ: ಮೊದಲಿಗೆ, ಎಪ್ರಿಲ್ 1999 ರಿಂದ ಮಾರ್ಚ್ 2000ದ ವರೆಗಿನ 12 ತಿಂಗಳ ಅವಧಿಯ 'ಬಡ್ಡಿತರುವ ಶಿಲ್ಕು' ಕಂಡುಹಿಡಿಯಬೇಕು.

ಸಂಖ್ಯೆ	ತಿಂಗಳು	ಶಿಲ್ಕು	ವಿವರಣೆ
1	ಎಪ್ರಿಲ್99	20	
2	ಮೇ99	295	
3	ಜೂನ್99	273	108 ರೂ.ಗಳನ್ನು 10ನೇ ತಾರೀಕಿನ ನಂತರ ಜಮಾ ಮಾಡಿದೆ.
4	ಜುಲೈ99	494	
5	ಆಗಸ್ಟ್99	470	
6	ಸಪ್ಟಂಬರ99	470	ಸಪ್ಟಂಬರ ತಿಂಗಳಲ್ಲಿ ಯಾವುದೇ ವ್ಯವಹಾರ ಮಾಡಿಲ್ಲ
7	ಅಕ್ಟೋಬರ99	453	10/10 ಕ್ಕೆ ಶಿಲ್ಕು 470 ರೂ ಆದರೂ ಆಮೆಲೆ ಹಣ ತೆಗೆದಿದೆ.
8	ನವಂಬರ99	583	
9	ಡಿಸೆಂಬರ99	583	105 ರೂ.ಗಳನ್ನು 10 ನೇ ತಾರೀಕಿನ ನಂತರ ಕಟ್ಟಿದೆ.
10	ಜನವರಿ2000	593	
11	ಫೆಬ್ರವರಿ2000	383	
12	ಮಾರ್ಚ್ 2000	421	
	ಒಟ್ಟು ಬಡ್ಡಿ ತರುವ ಶಿಲ್ಕು	5038	ಎಲ್ಲವನ್ನೂ ಕೂಡಿಸಿದೆ.

ಬಡ್ಡಿ = P*($\frac{T}{12}$)*($\frac{R}{100}$) = 5038*($\frac{1}{12}$)*($\frac{4}{100}$) = ರೂ.16.79 . ಈ ಮೊತ್ತವನ್ನು ಮಾಧುರಿಯ ಖಾತೆಗೆ 1/04/2000 ರಂದು ಜಮಾ ಮಾಡಲಾಗುತ್ತದೆ.

A Project of www.eShale.org

4.6.3. ಬ್ಯಾಂಕುಗಳಲ್ಲಿ ಇತರ ಠೇವಣಿಗಳ ಮೇಲೆ ಬಡ್ಡಿ

ಒಂದೇ ಸಾರಿ ಜನರ ಕೈಯಲ್ಲಿ ಹಣ ಸಿಕ್ಕಿದರೆ ಏನು ಮಾಡುತ್ತಾರೆ? (ಸೇವೆಯಿಂದ ನಿವೃತ್ತಿಯಾದಾಗ, ಆಸ್ತಿ ಮಾರಾಟವಾದಾಗ, ..). ಕೆಲವು ಸಾರಿ ಆ ಹಣ ಮುಂದೊಂದು ದಿನ ಆಸ್ತಿ ತೆಗೆದುಕೊಳ್ಳಲು ಬೇಕಾಗಬಹುದು. ಅಂತಹ ಸಂದರ್ಭದಲ್ಲಿ ಜನರು ಹೆಚ್ಚಿನ ಅವಧಿಗೆ ಬ್ಯಾಂಕಿನಲ್ಲಿ ಠೇವಣಿ ಇಡುವರು.

ದೀರ್ಘಾವಧಿ ಠೇವಣಿಯಲ್ಲಿ ಸಾಮಾನ್ಯವಾಗಿ 2 ವಿಧ:

1. ಸಂಚಿತ ಕಾಲಾವಧಿ ಠೇವಣಿ(CTD) :ಇಲ್ಲಿ ಅವಧಿ ಮುಗಿದ ನಂತರ, ಅಸಲು ಮತ್ತು ಬಡ್ಡಿ ಎರಡೂ ಒಟ್ಟಿಗೆ ಸಿಗುತ್ತದೆ.
2. ನಿರಖು ಠೇವಣಿ ಅಥವಾ ಮುದ್ದತ ಠೇವಣಿ(FD): ಇಲ್ಲಿ ಠೇವಣಿ ಇರುವವರೆಗೆ, ಕಾಲಕಾಲಕ್ಕೆ ಬಡ್ಡಿಯನ್ನು ಪಡೆಯುತ್ತಿರಬಹುದು.

A project of www.eShale.org

4.6.3.1. ಸಂಚಿತ ಕಾಲಾವಧಿ ಠೇವಣಿ:

ಈ ಯೋಜನೆಯಲ್ಲಿ ನಿಶ್ಚಿತ ಮೊಬಲಗನ್ನು ನಿಶ್ಚಿತ ಅವಧಿಗೆ ಠೇವಣಿ ಮಾಡುವರು. ಬಡ್ಡಿಯನ್ನು ಠೇವಣಿಯ ಅವಧಿ ಮುಗಿದ ನಂತರ ಅಸಲು ಹಣದ ಜೊತೆಗೆ ಕೊಡುತ್ತಾರೆ. ಕೆಲವು ಕಾಲದ ನಂತರ ಹಣ ಬೇಕಾಗುವವರಿಗೆ ಈ ಯೋಜನೆ ಸೂಕ್ತ. ಠೇವಣಿ ಅವಧಿಯು ಸಾಮಾನ್ಯವಾಗಿ ಕೆಲವು ವರ್ಷಗಳು. ಠೇವಣಿದಾರನು ಬ್ಯಾಂಕಿಗೆ ಈ ಪ್ರಯುಕ್ತ ಒಂದು ಅರ್ಜಿಯನ್ನು ಕೊಡಬೇಕು. ಆರಂಭಿಕ ಹಣ ಸಂದಾಯ ಮಾಡಿದಾಗ ಬ್ಯಾಂಕು ಅವನಿಗೆ ಈ ಬಗ್ಗೆ ದೃಢೀಕರಣ ಪತ್ರ ಕೊಡುತ್ತದೆ.

ಕರ್ನಾಟಕ ಬ್ಯಾಂಕ್ ನವರು ಕೊಟ್ಟ ಸಂಚಿತ ಕಾಲಾವಧಿ ಠೇವಣಿಯ ಮಾದರಿ ಪತ್ರ ನೋಡಿ:



THE KARNATAKA BANK LTD.
Regd. & Head Office: MANGALORE - 575 002
ದಿ ಕರ್ಣಾಟಕ ಬ್ಯಾಂಕ್ ಲಿ. दि कर्णाटक बैंक लि.

KBL/MPL/TDR/C 442339

BRANCH: B`LORE JAYANGR IX BLK (10)

ABHYUDHAYA CASH CERTIFICATE → (8) 061098796

Received from (1) 1.MR SOMAYAJI K V R
NO97 ,3RD MAIN ,2ND CROSS ,SARAKKI DOLLERS
LAYOUT ,J P NAGAR ,4TH PHASE ,BANGALORE-78
BANGALORE - 560078

the sum of Rs. (2) Rs.1,000.00 (One Thousand only.)

L.F. No.	Nature of Deposit and Receipt No.	(3) Issue Date	(4) Period	(5) Interest Rate	(6) Maturity Date	Nomination Registration No.
	0611500218414601 W.E.F 29-04-2009	29-04-2009	Days : Months: Years : 1 Yrs	8.50	29-04-2010	

Repayable to: SELF (7)

If Minor, Date of Birth

Maturity Value Rs.:
Rs.1,088.00 (One Thousand Eighty Eight only.) (9)

(12) THIS IS REINVESTMENT DEPOSIT WITH COMPOUNDING OF INTEREST QUARTERLY

1. MATURITY VALUE MENTIONED HEREIN MAY VARY DUE TO DEDUCTION OF TAX AT SOURCE AT THE APPRORPIATE RATE AS PER INCOME TAX RULES UNLESS OTHERWISE ELIGIBLE FOR EXEMPTION AND COMPOUNDING EFFECT OF INTEREST ON THE AMOUNT OF TAX SO DEDUCTED.
2. PENALTY LEVIED FOR PREMATURE CLOSURE.

(11)

Authorised Signatory
PRASAD P.A. No.765

Authorised Signatory
R.S. Pandurangaa P.A. No. 2391

Interest ceases from maturity date. Please present this duly discharged for renewal/payment

F. No. 691/9703 *Preferential rate is applicable only if the deposit is continued for the full contract period and in case of premature closure, interest shall be paid as per the applicable rate.

1. ಠೇವಣಿದಾರನ ಹೆಸರು
2. ಠೇವಣಿ ಮೊಬಲಗು
3. ಠೇವಣಿ ಇಟ್ಟ ತಾರೀಕು
4. ಠೇವಣಿ ಅವಧಿ
5. ಬಡ್ಡಿ
6. ಠೇವಣಿ ಹಿಂತಿರುಗಿಸುವ ದಿನಾಂಕ
7. ಠೇವಣಿಯ ಮರುಪಾವತಿ ವಿಧಾನ(ಯಾರೊಬ್ಬರಿಗೆ)
8. ಯಾವವಿಧದ ಠೇವಣಿ(ನಿರಖು. .)
9. ಮರುಪಾವತಿಸುವ ಹಣ
10. ಶಾಖೆಯ ಹೆಸರು
11. ಸಹಿ
12. ಇತರ ವಿವರಗಳು

4.6.3.3. ಸಂಚಿತ ಠೇವಣಿ ಅಥವಾ ಆವರ್ತಕ ಠೇವಣಿ



Karnataka Bank Limited

CD A/c No. L. F. No.

Date	Month	Amount Rs.	P.	Total Rs.	P.	Initials

F. No. 1240

Karnataka Bank Limited

(Regd. & Head Office : Mangalore - 575 002)

(7) ..... Branch

CUMULATIVE DEPOSIT PASS BOOK

Name & Address

(1)

A/C No. (2) L. F. No.

Period : 12/24 (3)

Monthly Instalment Rs. : (4)

Date of Commencement : (5)

Due Date : (6)

Conditions of Payment :

(8) Senior / Branch / Manager

1. ಖಾತೆದಾರನ ಹೆಸರು
2. ಖಾತಾ ಸಂಖ್ಯೆ
3. ಅವಧಿ(ತಿಂಗಳುಗಳು)
4. ಕಂತಿನ ಹಣ
5. ಆರಂಭಿಸಿದ ತಾರೀಕು
6. ಮುಗಿಯುವ ದಿನಾಂಕ
7. ಶಾಖೆಯ ಹೆಸರು
8. ನಿಯಮಗಳು



1. ದಿನಾಂಕ
2. ತಿಂಗಳು
3. ಕಂತಿನ ಹಣ
4. ಕಟ್ಟಿದ ಒಟ್ಟು ಹಣ
5. ಕಟ್ಟಿದ ಒಟ್ಟು ಹಣ
6. ಬಡ್ಡಿ
7. ಒಟ್ಟು ನೀಡುವ ಹಣ
8. ಸ್ವೀಕರಿಸಿದ ಹಣ
9. ಖಾತಾ ಸಂಖ್ಯೆ
10. ಸಹಿ

ಆವರ್ತಕ ಠೇವಣಿಯ ಅವಧಿ ಮುಗಿದೊಡನೆ ದೊರೆಯುವ ಹಣವನ್ನು ಲೆಕ್ಕ ಹಾಕಲು ಬ್ಯಾಂಕುಗಳು ಸಿದ್ಧ ಗಣಕ ಪಟ್ಟಿಯನ್ನು ಉಪಯೋಗಿಸುತ್ತವೆ.
8% ಬಡ್ಡಿ ದರದಂತೆ ಸಿದ್ಧಪಡಿಸಿದ ಮಾದರಿ ಕೆಳಗಿನಂತಿದೆ:

ಮಾಸಿಕ ಪಾವತಿ	6 ತಿಂಗಳು	.....	12 ತಿಂಗಳು	....	24 ತಿಂಗಳು	36 ತಿಂಗಳು	.....
20.	122.80		251.92		532.88	841.48	
.....							
50.	307.00		679.80		1332.20	2103.70	
....							
....							
100.	614.00		1259.60		2664.40	4207.40	
....	.....		.....		.....	.....	

A Project of www.eShale.org

ಗಮನಿಸಿ: ಬ್ಯಾಂಕುಗಳು, ಕೆಳಗೆ ನೀಡಿರುವ ಸೂತ್ರವನ್ನು ಉಪಯೋಗಿಸಿ ಸಿದ್ಧ ಗಣಕ ಪಟ್ಟಿಯನ್ನು ತಯಾರಿಸುತ್ತವೆ.

ನೀಡುವ ಹಣ= $P*(1+(\frac{R}{100}))^{n} + P*(1+(\frac{R}{100}))^{n-1} + P*(1+(\frac{R}{100}))^{n-2} + \ldots P*(1+(\frac{R}{100}))^{1}$

P = ಮಾಸಿಕ ಕಂತುಗಳ ಹಣ, n= RD ಕಟ್ಟಿದ ತಿಂಗಳುಗಳು, R= ತಿಂಗಳಿಗೆ ಬಡ್ಡಿಯ ದರ

4.6.3 ಸಮಸ್ಯೆ 1: ರಮೇಶನು 8% ಬಡ್ಡಿಯ ದರದಂತೆ ಒಂದು ಸಂಚಿತ ಠೇವಣಿ ಖಾತೆಯನ್ನು ಆರಂಭಿಸಿ, ಪ್ರತಿ ತಿಂಗಳೂ ರೂ.50 ರಂತೆ 3 ವರ್ಷಗಳವರೆಗೆ ಕಟ್ಟಿದರೆ 3 ವರ್ಷಗಳ ನಂತರ ಅವನಿಗೆ ಸಿಗುವ ಹಣವೆಷ್ಟು? ಅಲ್ಲದೆ ಅದರಲ್ಲಿ ಬಡ್ಡಿಯ ಭಾಗ ಎಷ್ಟು?

ಪರಿಹಾರ:

ಮೇಲಿನ ತಃಖ್ತೆಯಲ್ಲಿ ತಿಂಗಳಿಗೆ 50 ರೂ. ನಂತೆ 3 ವರ್ಷಗಳವರೆಗೆ ಕಟ್ಟಿದಾಗ ಅವಧಿ ಮುಗಿದೊಡನೆ ಸಿಗುವ ಹಣ ರೂ.2103.70.
ಆದ್ದರಿಂದ ರಮೇಶನಿಗೆ 3 ವರ್ಷಗಳ ನಂತರ ಸಿಗುವ ಮೊತ್ತ. ರೂ.2103.70
ಅವನು ಕಟ್ಟಿದ ಹಣ = ತಿಂಗಳ ಕಂತು* ಕಟ್ಟಿದ ತಿಂಗಳುಗಳು 50*36= ರೂ. 1800
ರಮೇಶನಿಗೆ ಸಿಕ್ಕ ಬಡ್ಡಿ = ಅವನಿಗೆ ಸಿಕ್ಕಿದ ಮೊತ್ತ- ಕಟ್ಟಿದ ಹಣ = 2103.70-1800 = 903.70.

ಗಮನಿಸಿ

1. ಮೇಲಿನ ಲೆಕ್ಕದಲ್ಲಿ ತಿಂಗಳ ಬಡ್ಡಿಯ ದರ = $\frac{8}{12}$ {ಠ ವರ್ಷದ(12 ತಿಂಗಳಿಗೆ) ಬಡ್ಡಿ = 8%}
2. ಠೇವಣಿಯ ಅವಧಿ ಹೆಚ್ಚಾದಂತೆ, ಬಡ್ಡಿಯ ದರ ಕೂಡಾ ಹೆಚ್ಚಾಗುತ್ತದೆ. ಎಲ್ಲಾ ಬ್ಯಾಂಕುಗಳಲ್ಲಿ ಸಾಮಾನ್ಯವಾಗಿ ಒಂದೇ ಬಡ್ಡಿಯ ದರ ಇರುತ್ತದೆ. ಬ್ಯಾಂಕಿನ ಇಂಟರ್ನೆಟ್ ಜಾಲವನ್ನು ವೀಕ್ಷಿಸಿದರೆ ಬೇರೆ ಬೇರೆ ಅವಧಿಗೆ ಕೊಡುವ ಬಡ್ಡಿಯ ದರವನ್ನು ತಿಳಿಯಬಹುದು.

A Project of www.eShale.org

ವಿವಿಧ ವಿಧದ ಠೇವಣಿಗಳ ನಡುವಿನ ವ್ಯತ್ಯಾಸ:

ನಂ.	ಲಕ್ಷಣಗಳು	ಸಂಚಿತ ಠೇವಣಿ(RD)	ನಿರಖು ಠೇವಣಿ (FD)	ಸಂಚಿತ ಅವಧಿ ಠೇವಣಿ(CTD)
1	ಖಾತೆ ತೆರೆಯುವವರು	ವ್ಯಕ್ತಿ/ಸಂಸ್ಥೆ		
2	ಖಾತೆಯ ಅವಧಿ	ನಿಶ್ಚಿತ ತಿಂಗಳುಗಳು	ನಿಶ್ಚಿತ ದಿನಗಳು	
3	ಠೇವಣಿ ಹಣ	ಪ್ರತೀ ತಿಂಗಳೂ ನಿರ್ಧರಿತ ಹಣ	ಸ್ಥಿರ ಕನಿಷ್ಠ ಆರಂಭಿಕ ಠೇವಣಿ	
4	ಹಣ ವಾಪಾಸು ಪಡೆಯುವುದು	ಅವಧಿ ಮುಗಿದ ನಂತರ		
5	ಬಡ್ಡಿ	ಅವಧಿ ಮುಗಿದಾಗ ಠೇವಣಿ ಹಣದ ಜೊತೆಗೆ ಬಡ್ಡಿ ಕೊಡುತ್ತಾರೆ.	1/3/6/12 ತಿಂಗಳಿಗೊಮ್ಮೆ ಬಡ್ಡಿ ಕೊಡುತ್ತಾರೆ.	ಅವಧಿ ಮುಗಿದಾಗ ಠೇವಣಿ ಹಣದ ಜೊತೆಗೆ ಬಡ್ಡಿ ಕೊಡುತ್ತಾರೆ.
6	ಉಪಯೋಗ	ನಿರ್ದಿಷ್ಟ ವರಮಾನ	ಒಮ್ಮೆಗೆ ಹಣ ಸಿಕ್ಕಿದಾಗ/ಬೇಕಿದ್ದರೆ	
7	ಕನಿಷ್ಟ ಠೇವಣಿ	ಠೇವಣಿಗೆ ಕನಿಷ್ಠ ಮಿತಿ ಇದೆ. ಬ್ಯಾಂಕಿನಿಂದ ಬ್ಯಾಂಕಿಗೆ ವ್ಯತ್ಯಾಸವಿರಬಹುದು		
8	ಹಣ ವಾಪಾಸು ಪಡೆಯುವ ವಿಧಾನ	ಬ್ಯಾಂಕ್ ಸಾಮಾನ್ಯವಾಗಿ ಚೆಕ್ ಮೂಲಕ, ಹಣವನ್ನು ಹಿಂತಿರುಗಿಸುತ್ತದೆ.		

A Project of www.eShale.org

4.6.3.4. ಬ್ಯಾಂಕ್ ಸಾಲಗಳು

ಬ್ಯಾಂಕು ಠೇವಣಿದಾರರಿಂದ ಹಣ ಪಡೆದಾಗ, ಅಲ್ಲಿ ತುಂಬಾ ಹಣ ಜಮೆಯಾಗಿರುತ್ತದೆ. ಇದನ್ನು ಬ್ಯಾಂಕಿನವರು ವಿಲೇವಾರಿ ಮಾಡಲೇಬೇಕು. ಈ ಹಣವನ್ನೇ ಅಗತ್ಯವಿರುವವರಿಗೆ ಸಾಲ ರೂಪದಲ್ಲಿ ಕೊಡುತ್ತಾರೆ. ಬ್ಯಾಂಕು ಠೇವಣಿದಾರರಿಗೆ ಬಡ್ಡಿ ಕೊಟ್ಟ ಹಾಗೆಯೇ ಸಾಲಗಾರರಿಂದ ಬಡ್ಡಿ ವಸೂಲು ಮಾಡುತ್ತದೆ.
ಬ್ಯಾಂಕುಗಳು ವಿವಿಧ ರೀತಿಯ ಸಾಲಗಳನ್ನು ಮಂಜೂರು ಮಾಡುತ್ತವೆ.

1. ಬೇಡಿಕೆ ಸಾಲ

ಈ ಸಾಲವು ಬ್ಯಾಂಕುಗಳು ಕೇಳಿದಾಗ ಪಾವತಿ ಮಾಡಬೇಕಾದ ಸಾಲಗಳು. ಈ ಸಾಲವನ್ನು ಪಡೆಯಲು ಸಾಲಗಾರನು ಬ್ಯಾಂಕಿಗೆ ನಿಶ್ಚಿತ ಮೊಬಲಗನ್ನ ಯಾವುದೇ ಶರತ್ತುಗಳಿಲ್ಲದೆ ನಿಶ್ಚಿತ ಅವಧಿಯಲ್ಲಿ ಪಾವತಿ ಮಾಡುತ್ತೇನೆಂದು ಬರೆದು, ಪ್ರಮಾಣ ಪತ್ರವನ್ನು ಸಲ್ಲಿಸಬೇಕು. ಸಾಮಾನ್ಯವಾಗಿ ಈ ಸಾಲದ ಅವಧಿ 3 ವರ್ಷಗಳಾಗಿರುತ್ತದೆ.

2. ಅವಧಿ ಸಾಲ

ಈ ಸಾಲವೂ ಕೂಡಾ ಬೇಡಿಕೆ ಸಾಲದಂತೆಯೇ ಆಗಿದೆ. ಆದರೆ ಮರು ಪಾವತಿಯ ಅವಧಿ ಮಾತ್ರ 3 ವರ್ಷಗಳಿಗಿಂತ ಹೆಚ್ಚು.

ಈ ಮೇಲೆ ತಿಳಿಸಿದ ಎರಡೂ ವಿಧದ ಸಾಲಗಳ ಪ್ರಯೋಜನವನ್ನು ಸಾಮಾನ್ಯ ವ್ಯಕ್ತಿಗಳು, ಉದ್ಯಮಿಗಳು ಮತ್ತು ಇತರರೂ ಪಡೆಯಬಹುದು. ಮೇಲೆ ಹೇಳಿದ ಎರಡು ವಿಧದ ಸಾಲಗಳಿಗೂ ಬಡ್ಡಿಯನ್ನು ನಿಶ್ಚಿತ ದರದಲ್ಲಿ ಪ್ರತಿ ದಿನದ ಉತ್ಪನ್ನವನ್ನು ಪರಿಗಣಿಸಿ, ತಿಂಗಳ ಶಿಲ್ಕಿನ ಆಧಾರದ ಮೇಲೆ ತ್ರೈಮಾಸಿಕವಾಗಿ ಲೆಕ್ಕಹಾಕಿ, ವಸೂಲು ಮಾಡುತ್ತಾರೆ.

A Project of www.eShale.org

4.6.3.5. ಅತಿರಿಕ್ತ ಕಡ ಅಥವಾ ಮೀರೆಳೆತ (ಓವರ್ ಡ್ರಾಫ್ಟ್)

ಇದನ್ನು 'ಸಾಲ' ಎಂದು ಕರೆಯುವುದಿಲ್ಲ. ಆದರೆ ಇದು ಕೆಲವು ದಿನಗಳ ಮಟ್ಟಿಗೆ ವ್ಯಕ್ತಿಯು ಪಡೆಯುವ ಸಾಲ ರೂಪದ ಹಣ. ಅಂದರೆ ಚಾಲ್ತಿ ಖಾತೆ ಹೊಂದಿರುವವರು ತಮ್ಮ ಖಾತೆಯಲ್ಲಿರುವ ಸಾಲ ರೂಪದ ಹಣ ಒಂದು ಮಿತಿಗೆ ಮೀರದಂತೆ ಹಣ ಪಡೆಯಬಹುದು. ಆ ಮಿತಿಯನ್ನು ಕುರಿತು ಬ್ಯಾಂಕು ಮತ್ತು ಖಾತೆದಾರ ಒಂದು ಒಪ್ಪಂದಕ್ಕೆ ಸಹಿ ಹಾಕಿರಬೇಕು. ಸಾಮಾನ್ಯವಾಗಿ ವ್ಯವಹಾರಸ್ಥರು, ವರ್ತಕರು ಈ ಸೌಲಭ್ಯವನ್ನು ಪಡೆಯುತ್ತಾರೆ. ಈ ಸಾಲಕ್ಕೆ ದಿನ ದಿನಕ್ಕೆ ಬಡ್ಡಿಯನ್ನು ಲೆಕ್ಕಹಾಕಿ, ತ್ರೈಮಾಸಿಕವಾಗಿ ಖಾತೆಯಿಂದ ಕಳೆಯುತ್ತಾರೆ.

ಸಾಲಗಳ ಮೇಲೆ ಬಡ್ಡಿಯ ಲೆಕ್ಕಾಚಾರದ ಸೂತ್ರ:

ಪ್ರತಿ ದಿನದ ಉತ್ಪನ್ನ = ಶಿಲ್ಕು* ಶಿಲ್ಕು ಬಾಕಿಯಿರುವ ದಿನಗಳ ಸಂಖ್ಯೆ
ಬಡ್ಡಿ = (ದೈನಿಕ ಉತ್ಪನ್ನಗಳ ಮೊತ್ತ* ಬಡ್ಡಿಯದರ) ÷ (100*365)

A Project of www.eShale.org

4.6.3 ಸಮಸ್ಯೆ 2: 15/1/01 ರಂದು ವರ್ಷಕ್ಕೆ 12% ದರದಲ್ಲಿ ಒಬ್ಬನು ರೂ.1,00,000 ಸಾಲವನ್ನ ಪಡೆಯುತ್ತಾನೆ. 18/2/01ರಂದು 25,000 ರೂ.ಗಳು , 16/03/01 ರಂದು 10,000ರೂ.ಗಳು 28/4/01 ರಂದು 40,000ರೂ.ಗಳನ್ನ ಬ್ಯಾಂಕಿಗೆ ಪಾವತಿ ಮಾಡುತ್ತಾನೆ. 16/5/01ರಂದು ಸಂಪೂರ್ಣವಾಗಿ ಉಳಿದ ಸಾಲದ ಹಣವನ್ನು ಪಾವತಿ ಮಾಡುತ್ತಾನೆ. ತ್ರೈಮಾಸಿಕವಾಗಿ ಚಕ್ರೀಕರಿಸಿದ ಬಡ್ಡಿಯನ್ನು ಲೆಕ್ಕಹಾಕಿ.

ಪರಿಹಾರ:

ನಾವೀಗ ಮೊತ್ತ ಮೊದಲಿಗೆ, ಸಾಲ ತೆಗೆದುಕೊಂಡ ದಿನ 15/1/01 ರಿಂದ 28/4/01ರವರೆಗಿನ ದೈನಿಕ ಉತ್ಪನ್ನಗಳನ್ನ ಲೆಕ್ಕಹಾಕಬೇಕು.

ಬಾಕಿ ಸಾಲ	ವಿವರ	ಎಲ್ಲಿಂದ	ಎಲ್ಲಿವರೆಗೆ	ದಿನಗಳ ಸಂಖ್ಯೆ	ದೈನಿಕ ಉತ್ಪನ್ನ =ಬಾಕಿ * ದಿನಗಳು
1,00,000	ಆರಂಭಿಕ ಸಾಲ	15/01/01	17/02/01	34(=17+17)	34,00,000=1,00,000*34
75,000	18/02/01 ರಂದು 25,000 ಕಟ್ಟಿದ್ದರಿಂದ ಸಾಲದ ಬಾಕಿ ಕಡಿಮೆಯಾಯ್ತು	18/02/01	15/03/01	26(=11+15)	19,50,000= 75,000*26
65,000	16/03/01 ರಂದು 10,000 ರೂ. ಕಟ್ಟಿದ್ದರಿಂದ ಸಾಲದ ಬಾಕಿ ಕಡಿಮೆಯಾಯ್ತು	16/03/01	27/04/01	16	10,40,000=65,000*16
ಬಡ್ಡಿಯನ್ನು ತ್ರೈಮಾಸಿಕವಾಗಿ ಲೆಕ್ಕ ಹಾಕುವುದರಿಂದ 31/03/01 ರ ತ್ರೈಮಾಸಿಕಕ್ಕೆ ಬಡ್ಡಿ ಕಂಡು ಹಿಡಿಯಬೇಕು.					
	ದೈನಿಕ ಉತ್ಪನ್ನಗಳ ಮೊತ್ತ =6390000(=3400000+1950000+1040000) ಬಡ್ಡಿ = (ದೈನಿಕ ಉತ್ಪನ್ನಗಳ ಮೊತ್ತ * ಬಡ್ಡಿಯದರ) ÷ (100*365) $= \frac{6390000*12}{100*365}$ = 2100.82 (2100 ಇರಲಿ) 01/04/01 ರಂದು ಶಿಲ್ಕು =67,100 (= 65,000 ಸಾಲ + ಬಡ್ಡಿ 2,100)				
67,100	16/03/01 ರಂದು 10,000ರೂ. ಕಟ್ಟಿದ್ದರಿಂದ ಸಾಲದ ಬಾಕಿ ಕಡಿಮೆಯಾಯ್ತು	01/04/01	27/04/01	27	18,11,700 =67,100*27
25,000	28/04/01 ರಂದು 40,000 ಕಟ್ಟಿದ್ದರಿಂದ ಸಾಲದ ಬಾಕಿ ಕಡಿಮೆಯಾಯಿತು.	28/04/01	15/05/01	18(=3+15)	4,50,000=25,000*18
0	16/05/01 ರಂದು ಸಾಲ ತೀರಿತು.				
	ದೈನಿಕ ಉತ್ಪನ್ನಗಳ ಮೊತ್ತ =22,61,700(=18,11,700+4,50,000); ಬಡ್ಡಿ = (ದೈನಿಕ ಉತ್ಪನ್ನಗಳ ಮೊತ್ತ * ಬಡ್ಡಿಯದರ) ÷ (100*365) $= \frac{2261700*12}{100*365}$ = 743.57, ಒಟ್ಟು ನೀಡಿದ ಬಡ್ಡಿ = 2100.82+743.57 = 2,844.39				

A Project of www.eShale.org